ಪ್ರಾಮಾಣಿಕತೆಯನ್ನು ಮೆಚ್ಚಿ ಅದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಎಂ.ಎಂ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಕಳಕಳಿಯನ್ನು ನಾವೂ ಕೂಡ ಅರ್ಥಮಾಡಿಕೊಂಡಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ ಇದರ ಬಗ್ಗೆ ಈ ಇಲಾಖೆಯ ಬಗ್ಗೆ ನಾವು ಸ್ವಲ್ಪ ಚಾಲನೆಯನ್ನು ಕೊಟ್ಟಿದ್ದೇವೆ. ಮುಂಚೆ ಏನು ನಡೆದಿತ್ತು ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಸರ್ಕಾರ ಬಂದಮೇಲೆ ಬಹಳ ಕಟ್ಟುನಿಟ್ಟಾಗಿ ಅನೇಕ ಕಡೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಅದರ ಫಲವಾಗಿ ಇವತ್ತು ನಮ್ಮ ರೆವಿನ್ಯೂ ಕೂಡ ಜಾಸ್ತಿಯಾಗಿದೆ. ನಮ್ಮ ಸರ್ಕಾರ ಬಂದಾಗ ನಮ್ಮ ಉತ್ಪತ್ತಿ 1019 ಕೋಟಿ ರೂ ಇತ್ತು ಇವತ್ತು 2300 ಕೋಟಿ ರೂಪಾಯಿಗೆ ನಾವು ತಲುಪಿದ್ದೇವೆ. ಏನು illegal transportation ನಡೆಯುತ್ತಿದೆ ಅಥವಾ ಸೆಕೆಂಡ್ಸ್, ಥರ್ಡ್ಸ್ ಮಾರುತ್ತಾರೆ, ಕಳೆದ ವರ್ಷ ನಾವು 74 ಕೋಟಿ ಮೌಲ್ಯದ ಈ ಸೆಕೆಂಡ್ಸ್, ಥರ್ಡ್ಸ್ ಮಾರುವ non duty paid liquor shop ಗಳನ್ನು ಸೀಜ್ ಮಾಡಿದ್ದೇವೆ. ಹನ್ನೆರಡು ಸಾವಿರಕ್ಕಿಂತ ಹೆಚ್ಚು ರೈಡ್ಸ್ ಮಾಡಿ ಆರೇಳು ಸಾವಿರ ಜನರನ್ನು ಅರೆಸ್ಟ್ ಮಾಡಿದ್ದೇವೆ. ಇವತ್ತೂ ಕೂಡ ನಮಗೆ ವೆಹಿಕಲ್ಸ್‌ನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಸುಮಾರು ಐದುನೂರು–ಆರುನೂರು ವೆಹಿಕಲ್ಸ್‌ನ್ನು ಸೀಜ್ ಮಾಡಿದ್ದೇವೆ. What more we can do? ಇದನ್ನು ಮ್ಯಾಕ್ಸಿಮಮ್ ಮಾಡಿಕೊಂಡು ಬಂದಿದ್ದೇವೆ. So, far, no Government has done this. We are proud to say. ಆದ್ದರಿಂದ ಇದು ನಿಜ. ಇಲ್ಲವೆಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಅದು ಆಗುತ್ತಿರಬಹುದು. ಆದರೆ we are trying to plug all the loop holes of the Department. ಇವತ್ತು ಕಾರ್ಪೊರೇಷನ್ ಮಾಡಿದ್ದೂ ಕೂಡ ಇದೇ ಉದ್ದೇಶಕ್ಕಾಗಿ, ಕಾರ್ಪೊರೇಷನ್ ಮಾಡಿದಮೇಲೆ ನಮ್ಮ ಉತ್ಪತ್ತಿ ಕೂಡ ಜಾಸ್ತಿಯಾಗಿದೆ. 2001ರ ಜುಲೈನಲ್ಲಿ ನಮಗೆ 41 ಕೋಟಿ ರೂಪಾಯಿ ಬಂದಿತ್ತು. 2002ರ ಜುಲೈನಲ್ಲಿ 51 ಕೋಟಿ ರೂಪಾಯಿ ಬಂದಿತ್ತು. ಆದರೆ ಈ ಸಲ ಜುಲೈ ತಿಂಗಳಲ್ಲಿ 101 ಕೋಟಿ ರೂಪಾಯಿ ಬಂದಿದೆ. That shows there is an improvement in the Excise Department and the revenue is also increasing. So we are doing all the best to prevent all loop holes, to plug....

ಶ್ರೀ ಎಸ್. ಸುರೇಶ್‌ಕುಮಾರ್ : ಲೈಸೆನ್ಸ್ ಕ್ಯಾನ್ಸಲ್ ಮಾಡದೇ ಇರುವುದು, ಮತ್ತು ಪೆನಾಲ್ಟಿವೈಸ್ ಏನು ಮಾಡಿದ್ದೀರಿ ಇದು ಇಂಪ್ರೂವ್‌ಮೆಂಟ್ ಅಲ್ಲ. ಇದು ಸಮಾಜಕ್ಕೆ ಬಗೆಯತಕ್ಕಂಥ ದ್ರೋಹ ಆಗಿದೆ. ಇದು ಸಮಾಜಕ್ಕೆ ಮಾರಕ. You are anti-social, anti-Society. ಇಂತಹ ಒಂದು reprehensible Bill ಗೆ ನಾವು ಭಾಗಿಯಾಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಇದು ಸರಿಯಾದಂಥ ಬಿಲ್ ಅಲ್ಲ. ನಮ್ಮ ಅಧಿಕಾರಿಗಳನ್ನು ಮತ್ತಷ್ಟು ಭ್ರಷ್ಟರನ್ನಾಗಿ ಮಾಡುವಂತಹ ಬಿಲ್ ಇದು. ರಾಜ್ಯದ ಜನರನ್ನು ಹಾಳುಮಾಡುವಂತಹ ಬಿಲ್. ಯಾರು ಲೈಸೆನ್ಸ್ ಅಂಗಡಿಗಳಲ್ಲಿ ಇಲ್ಲಿಗಲ್ ಆಗಿ ಮಾರಾಟ ಮಾಡುತ್ತಿದ್ದಾರೆ, ನಿಮ್ಮ ಅಧಿಕಾರಿಗಳ ರಕ್ಷಣೆ ಅವರಿಗೆ ಇದೆ. ಅಂತಹವರಿಗೆ ಮಣೆ ಹಾಕುವಂತಹ ಬಿಲ್ ಇದಾಗಿದ್ದು ನಾನಂತೂ ವೈಯಕ್ತಿಕವಾಗಿ ಇದನ್ನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)